
ಕಥೆ

# ನಿರೀಕ್ಷೆ

■ ಮೂಲ ಹಿಂದಿ: **ಅನಾಮಿಕ ಚಕ್ರವರ್ತಿ**
■ ಕನ್ನಡಕ್ಕೆ: **ಎಚ್.ಎಮ್. ಕುಮಾರಸ್ವಾಮಿ**



**ಪ್ರಿಯ...** ಹೃದಯಾಂತರಾಳದಲ್ಲಿ ಹುದುಗಿರುವ ಖಿನ್ನತೆ ಮತ್ತೆ ಹಣಕಿ ಹಾಕುತ್ತಿದೆ. ನೀವು ಇಂದು ಪುನಃ ತುಂಬಾ ನೆನಪಾಗುತ್ತಿರುವಿರಿ.

ನೋಡಿ ಪ್ರಿಯ, ನೀಲಿ ಆಕಾಶವನ್ನು. ಮೇಘಗಳು ಇಂದು ಪುನಃ ತಮ್ಮ ಬಾಹುಗಳಲ್ಲಿ ಬಂಧಿಸಿಬಿಟ್ಟಿವೆ. ಥೇಟ್ ನೀವು ನನ್ನನ್ನು ಬಾಹುಗಳಲ್ಲಿ ತುಂಬಿಕೊಂಡು ಪ್ರೀತಿಯ ಮಳೆ ಸುರಿಸುತ್ತಿದ್ದ ಹಾಗೆ.

ಮೇಘಗಳ ಸಂತೋಷವನ್ನು ಕಂಡು ಆಕಾಶದ ಕಣ್ಣುಗಳು ಹೊಳೆಯುತ್ತಿವೆ. ಮೇಘವೂ ಬುವಿಗೆ ಹನಿ ಹನಿಸಲು ಕಾತುರಗೊಂಡಿದೆ. ಯಾಕಾಗಬಾರದು? ಬುವಿಯೊಂದಿಗೇನೇ ಅದರ ಪ್ರೀತಿ ತಾನೇ...!

ಮೇಘಗಳು ಮಳೆ ಸುರಿಸುತ್ತಾ ಬುವಿಯನ್ನು ಸ್ಪರ್ಶಿಸಿದಾಗ ಭೂಮಿಯು ಹರ್ಷಗೊಂಡು ಅರಳುತ್ತದೆ. ಅದರ ಹರ್ಷದ ಘಮಲು ಸುತ್ತೆಲ್ಲಾ ಹರಡಿ ಘಮಘಮಿಸುತ್ತದೆ... ನದಿಗಳು ಕಲಕಲ ನಾದದಿಂದ ಹರಿಯುತ್ತವೆ... ಹಾಗೆಯೇ ನನಗೂ ನಿಮ್ಮ ನಿರೀಕ್ಷೆ ಇದೆ... ನಾನು ಬುವಿಯ ಹಾಗೆ ಹಸಿರು ಹಸಿರಾಗ ಬಯಸುತ್ತೇನೆ... ಕಲಕಲ ನಾದದಿಂದ ಹರಿಯ ಬಯಸುತ್ತೇನೆ. ನನ್ನ ಪ್ರೀತಿಯ ಪರಿಮಳ ಸುತ್ತಲೂ ಘಮಘಮಿಸಲಿಚ್ಛಿಸುತ್ತದೆ...

ಆದರೆ ಏಕೋ ಕಾಣೆ, ನಿಮ್ಮ ಕಡೆಗೆ ಬರುವ ಎಲ್ಲಾ ಹಾದಿಗಳು ಮುಚ್ಚಿವೆ ಎನಿಸುತ್ತಿದೆ ನನಗೆ. ನಾನೊಂದು ದಿಕ್ಕು ತಪ್ಪಿದ ಹಕ್ಕಿಯ ಹಾಗೆ ಅಂಡಲೆಯುತ್ತಿರುವೆ. ಮರಳು ಭೂಮಿಯ ಶುಷ್ಕ ಗಾಳಿ ನನ್ನ ಗಂಟಲೊಳಗೆ ಇಳಿದು ಒಣಗಿಹೋದ ಹಾಗೆ ಅನ್ನಿಸುತ್ತಿದೆ. ಒಂದು ನೀರಡಿಕೆ ನನ್ನನ್ನು ಹೀಗೆ ಬಂಧಿಸಿಬಿಟ್ಟಿದೆ.

ನಮ್ಮ ಬದುಕು ಹೀಗೆ ತೆರೆದುಕೊಂಡಿತ್ತು ಆಗ. ಅಲ್ಲಿ ಏಕಾಧಿಕಾರವಿರಲಿಲ್ಲ. ಅವರು ತನ್ನನ್ನು ಸ್ವನಿಯಂತ್ರಣದಲ್ಲಿ ಇಟ್ಟುಕೊಳ್ಳಲೇ ಇಲ್ಲ. ಏಕೆಂದರೆ ತನ್ನನ್ನು ತಾನು ಸಂಪೂರ್ಣವಾಗಿ ಪ್ರೀತಿಗೆ ಅರ್ಪಿಸಿಬಿಟ್ಟಿದ್ದರು. ಪ್ರೀತಿಯ ಬಯಕೆಯೇ ಅವರ ಜೀವನದ ಸಾರವಾಗಿ ಹೋಗಿತ್ತು.

ಕೆಲವು ವರ್ಷಗಳ ತನಕ ನಾವಿಬ್ಬರೂ ಒಂದೇ ದಾರಿಯಲ್ಲಿ ನಡೆದಿದ್ದರೂ ಅಪರಿಚಿತರ ಹಾಗೇ ಇದ್ದೆವು. ಯಾರ ದೃಷ್ಟಿಯೂ ಇನ್ನೊಬ್ಬರ ಮೇಲೆ ಬಿದ್ದಿರಲಿಲ್ಲ. ಆದರೆ ವಿಧಿಗೆ ಬೇರೆಯೇ ಉದ್ದೇಶ ಇದ್ದಂತಿತ್ತು. ಆ ಜನಜಂಗುಳಿಯಲ್ಲಿ ನಾವು ಪರಸ್ಪರ ಅಜ್ಞಾತರಾಗಿಯೇ ಇದ್ದೆವು. ಆದರೆ...

ಯಾರೋ ಆತ್ಮೀಯತೆಯಿಂದ ನಮ್ಮನ್ನು ಪರಿಚಯಿಸಿದರು. ಅವರ ಹೆಸರನ್ನು ಹೇಳಿದರೂ ಆ ಹೆಸರನ್ನು ಕೇಳಿದ ತಕ್ಷಣ ನನ್ನ ಶರೀರದಲ್ಲೆಲ್ಲಾ ಮಂಜಿನ ಸಿಂಚನವಾದಂತಾಗಿ ತಣ್ಣನೆಯ ರೋಮಾಂಚನ ಉಂಟಾಯಿತು. ಎಷ್ಟು ಸಮಯದಿಂದ ನಾನು ಕಿವಿಯಾರೆ ಕೇಳಿಸಿಕೊಳ್ಳುತ್ತಿದ್ದ ಹೆಸರೇ ಅದು. ಆ ಹೆಸರು ಕೇಳಿದಾಗಲೆಲ್ಲಾ ಗದ್ದಲ ತುಂಬಿದ ಸಭೆಯೊಳಗೆ ಗಾಜು ಬಿದ್ದು ಒಡೆದರೂ ಆ ಶಬ್ದದ ಅನುಭವವಾಗುತ್ತಿತ್ತು.

ಅವರ ಕಣ್ಣುಗಳು ಹೊಳೆಯುತ್ತಾ ಮುಗುಳ್ನಗುತ್ತಿದ್ದವು. ಆ ದೃಷ್ಟಿ ಮಿಂಚಿನ ಹಾಗೆ ನನ್ನಂತರಾಳದೊಳಗೆ ಇಳಿದು ಮಿನುಗುತ್ತಿತ್ತು. ಅವರು ಎತ್ತರದ ಆಕರ್ಷಕ ಮೈಕಟ್ಟಿನ ವ್ಯಕ್ತಿಯಾಗಿದ್ದರು. ಸಮಯದೊಂದಿಗೆ ತನ್ನನ್ನು ಸಂಭಾಳಿಸಿಕೊಳ್ಳುವ ತೀಕ್ಷ್ಣ ಬುದ್ಧಿ, ಆತ್ಮವಿಶ್ವಾಸ ತುಂಬಿದ ವ್ಯಕ್ತಿತ್ವ ಅವರದಾಗಿತ್ತು.

ಅವರ ಎಲ್ಲಾ ಸಂಕಷ್ಟಗಳ ಸಮಯದಲ್ಲಿ ತನ್ನ ಪಾಲಿನ ಬೆಳಕನ್ನು ಸೂಸಿ ಧಾರೆಯೆರೆಯ ಬಯಸುತ್ತಾ ಅವರೊಳಗಿನ ಅಂಧಕಾರವನ್ನು ಕಳೆಯ ಬಯಸುತ್ತಿದ್ದರು. ಋಣಮುಕ್ತಿಯ ಪ್ರೀತಿಯು ಅವರದಾಗಿತ್ತು. ಆದರೆ ಪೂರ್ಣವಾಗಿ ನನ್ನನ್ನು ಅರಿಯಲು ಅಸಮರ್ಥರಾದರು ಅವರು.

ಆದರೆ ನನ್ನೊಳಗೊಂದು ವಿಶ್ವಾಸವಿತ್ತು. ನನ್ನನ್ನು ನಾನು ಅರ್ಥಮಾಡಿಕೊಳ್ಳುವಷ್ಟು. ನಾವು ಬೇರೆ ಬೇರೆ ನಗರದಲ್ಲಿದ್ದರೂ ನನ್ನ ಪ್ರೀತಿಯಲ್ಲಿ ಕೊರತೆ ಉಂಟಾಗಲಿಲ್ಲ. ಆದರೆ ಇದ್ದಕ್ಕಿದ್ದ ಹಾಗೆ ಎಲ್ಲದಕ್ಕೂ ವಿರಾಮ... ಪ್ರೇಮವೇ ಆವಕ್ಕಾಗಿ ಹೋಯಿತು. ಅಂಧವಿಶ್ವಾಸದಿಂದ ಮಲಿನವಾಗಿ ಅಲ್ಲಿ ಮೌನ ಮತ್ತು ಪ್ರಶ್ನೆ ಜನ್ಮ ತಳೆದವು.

ನಾನು ಇದನ್ನು ನನ್ನ ಪಾಲಿನ ಭಾಗ್ಯದ ದೋಷ ಎಂದು ಪರಿಗಣಿಸಲೇ...? ಹಾಗೆಂದುಕೊಂಡರೆ ನಮ್ಮ ಪ್ರೇಮ ಸಂಶಯಕ್ಕೊಳಗಾಗುತ್ತದೆ. ನಾನು ಪ್ರೇಮವನ್ನು ಯಾಕಾದರೂ ಪ್ರಶ್ನೆ ಮಾಡಲಿ? ಒಂದು ವೇಳೆ ಹಾಗೆ ಮಾಡದಿದ್ದರೆ

> ಈ ಪ್ರೇಮ ಇಷ್ಟೊಂದು ಯಾತನೆಯನ್ನು ಯಾಕಾದರೂ ನೀಡುತ್ತದೆ? ನಾನು ಪ್ರಶ್ನೆಯ ಸುಳಿಯಲ್ಲಿ ಸಿಲುಕಿಬಿಡುತ್ತೇನೆ. ಹಾಂ., ನನಗಿನ್ನೂ ನೆನಪಿದೆ... ಪ್ರೇಮ ದುಃಖಾಗ್ನಿಯಲ್ಲಿ ಬೆಂದಷ್ಟೂ ಆಳ ಹಾಗೂ ಪ್ರಗಾಢವಾಗುತ್ತದೆ...